ವರಮಾನ ಸಾಕಾಗಲಿಲ್ಲ. ತೋಟದ ಪಕ್ಕದ ಒಂದೆರಡು ಎಕರೆ ಕಾಡು ಒತ್ತುವರಿ ಮಾಡಿ ಅಲ್ಲಿಯೂ ಯಾಲಕ್ಕಿ ಬೆಳಸಿದಳು. ಮೈತುಂಬಾ ಒಡವೆ ಹೇರಿಕೊಂಡಳು. ಉಳಿದ ದುಡ್ಡು ತೌರುಮನೆಗೆ ಸಾಗಿಸಿದಳು. ಕೊರಗಿಗೆ ಬಿದ್ದ ದ್ಯಾವಪ್ಪಗೌಡರು ಬೇಗ ತೀರಿಕೊಂಡರು. ಅಷ್ಟರಲ್ಲಿ ಹ್ಯಾಗೋ ಅವರು ಮಗಳ ಮದುವೆ ಮಾಡಿ ಮುಗಿಸಿದ್ದರು.

ಅತ್ತಿಗೆಯ ದರ್ಬಾರಿನಲ್ಲಿ ಮೂಗಬಸವನಂತೆ ತೋಟ ಗದ್ದೆ ಗೇಯುತ್ತಿದ್ದ ಮಂಜುನಾಥನ ವಯಸ್ಸು ಮೂವತ್ತರ ಹತ್ತಿರ ಬಂದಿತ್ತು. ನೆಂಟರಿಷ್ಟರೆಲ್ಲಾ ಸೇರಿ ಅವನಿಗೊಂದು ಮದುವೆ ಮಾಡಿದರು. ಬಂದ ಸೊಸೆಗೆ ಆ ಮನೆಯಲ್ಲಿ ಒಂದು ತಿಂಗಳೂ ಬಾಳಲು ಆಗಲಿಲ್ಲ.

ಕೆಂಪಮ್ಮನೊಂದಿಗೆ ಹೊಸ ಸೊಸೆ ಒಂದೇ ಮನೆಯಲ್ಲಿದ್ದು, ಒಂದೇ ಜಮೀನಿನಲ್ಲಿ ಕೆಲಸ ಮಾಡಿಕೊಂಡಿರುವುದು ಸಾಧ್ಯವಿಲ್ಲವೆಂಬುದು ಬಡ್ಡೆಯವರಿಗೆಲ್ಲಾ ಅರಿವಾಗಿ ಹೋಯಿತು.

ಆಗೆಲ್ಲಾ ಬಡ್ಡೆಯ ಹಿರಿಯನೇ ಆ ಬಡ್ಡೆಯ ಕುಟುಂಬಗಳ ಎಲ್ಲಾ ರಗಳೆಗಳನ್ನೂ ಬಗೆಹರಿಸುತ್ತಿದ್ದ. ಬೇರೆ ಬೇರೆ ಬಡ್ಡೆಗಳಿಗೆ ಸಂಬಂಧಿಸಿದ ರಗಳೆಗಳಾದರೆ ಮಂದೆ ಪಟೇಲರೋ, ನಾಡಗೌಡರೋ ಬಗೆಹರಿಸ ಬೇಕಾಗಿತ್ತು. ಅಂದಿನ ದಿನಗಳಲ್ಲಿ ಅವರ ಮಾತುಗಳಿಗೆ ಅಷ್ಟು ಬೆಲೆ. ಈಗಿನಂತೆ ಎಲ್ಲದಕ್ಕೂ ಕಾಗದ ಪತ್ರ ಮಾಡಿ ಆಫೀಸಿನಲ್ಲಿ ನೋಂದಣಿ ಮಾಡಿಸಬೇಕಾಗಿರಲಿಲ್ಲ.

ಕುಟುಂಬದ ವಿಚಾರ ಹಂಚಿನಮನೆ ಬಡ್ಡೆಯ ಹಿರಿಯ ತಲೆ ಕುಂಜೇಗೌಡರ ಬಳಿ ಹೋಯಿತು. ಅವರೂ ಕುಟುಂಬ ಪಾಲಾಗುವುದೇ ಸರಿ ಎಂದರು.

'ಯಾಲಕ್ಕಿ ಹನಾಲು ಇಷ್ಟ್ ವರ್ಷ ನಿಗಾ ಮಾಡಿ ಅಭಿವೃದ್ಧಿ ಮಾಡಿರಳು ನಾನು. ಅದ ಮಾತ್ರ ಯಾರಿಗೂ ಬಿಟ್ ಕೊಡದಿಲ್ಲ' ಎಂದು ಚಾಂಡಿ ವಾದ ಹೂಡಿದಳು. ಅವಳ ಬಾಯಿ ಕಟ್ಟುವುದಕ್ಕೆ ಯಾರಿಗೂ ಆಗುವಂತಿರಲಿಲ್ಲ. ಎರಡು ಜನ ಸೊಸೆಯರೂ ಒಂದೇ ಕಡೆ ತಿರುಗಾಡಿಕೊಂಡು ವ್ಯವಹಾರ ಮಾಡ್ತಾ ಇದ್ರೆ ಯಾವತ್ತಾದ್ರೂ ಕಡಿದಾಡಿ ಸಾಯ್ತಾರೆ ಎನಿಸಿತು ಹಿರಿಯರಿಗೆ.

ಕೊನೆಗೆ ಕುಂಜೇಗೌಡರು ತೀರ್ಪು ಕೊಟ್ಟರು.

ಯಾಲಕ್ಕಿ ಹನಾಲು ನಾಲ್ಕೆಕರೆ, ಊರ ದೊಡ್ಡ ಬಯಲ ಗದ್ದೆ ಎರಡೆಕರೆ, ಇರುವ 'ತಾಯಿಮನೆ' ಹಿರಿಮಗ ಪುಟ್ಟೇಗೌಡನಿಗೆ. ದೇವರಬನದ ಗದ್ದೆ ಎರಡೂವರೆ ಎಕರೆ, ಅದರ ಪಕ್ಕದ ಕುರೋವು ಐದೆಕರೆ ಕಿರಿಮಗ ಮಂಜುನಾಥನಿಗೆ. ಕೆರೆ ಏರಿ ತಗ್ಗಿನಲ್ಲಿ, ರೋಡಾಚೆ ಗದ್ದೆಗೆ ಹೊಂದಿಕೊಂಡಿರುವ ಒಂದೆಕರೆ ಹಡ್ಲು ಜಾಗ ಮುದುಕಿ ಪಾಲಿಗೆ. ಯಾರು ಮುದುಕಿಯನ್ನು ಜೊತೆಗೆ ಇಟ್ಟುಕೊಂಡು ಅದರ ಸಾಯುವ ಕೊನೆಯ ಕಾಲದವರೆಗೂ ನೋಡಿಕೊಳ್ಳುತ್ತಾರೋ ಅವರಿಗೆ ಆ ಜಮೀನು ಎಂಬುದಾಗಿತ್ತು ಕುಂಜೇಗೌಡರ ತೀರ್ಪು.

ಆಗ ಉದ್ಭವಿಸಿದ್ದು ಸಮಸ್ಯೆ... ಮುದುಕಿ ಯಾರ ಜೊತೆ ಇರುವುದು?

ಮುದುಕಿ ಹಿರಿಮಗನೊಂದಿಗೆ ಮೂಲ 'ತಾಯಿಮನೆ' ಯಲ್ಲೇ ಇರುವುದು ಸೂಕ್ತ ಎಂಬ ಸಲಹೆ ಬಂತು ಹಿರಿಯರಿಂದ.

'ಬೇಡ ಬೇಡ, ಯಾವುದೇ ಕಾರಣಕ್ಕೂ ಬೇಡ. ಆ ಕೊಟಗುಡುವ ಮುದುಕಿಯ ಹಾಳಿ ಯಾವಳು ಕೇಳ್ತಾ ಕೂತ್ಗಳ್ತಾಳೆ ಯಾವಾಗ್ಲೂ... ಆ ಮೂಳ ಮುದುಕಿಯೂ ಬೇಡ, ಹಾಳ್ ಹಡ್ಲೂ ಬೇಡ. ಎರಡನ್ನೂ ಅವರಿಗೇ ವಹಿಸಿಬಿಡಿ' ಎಂದಳು ಚಾಂಡಿ.

ಹಾಗೆ, ಮಂಜುನಾಥ ದೇವರಬನದ ಆಚೆ ಮನೆ ಮಾಡಿಕೊಂಡಮೇಲೆ ಮುದುಕಿಯನ್ನು ಕರೆದುಕೊಂಡು ಹೋಗುವುದೆಂದು ತೀರ್ಮಾನವಾಯಿತು.

* * *

ಕಾಲ ಹಾಗೆಯೇ ಇರಲಿಲ್ಲ. ಯಾಲಕ್ಕಿಗೆ ಕಟ್ಟೆ ರೋಗ ಬಂತು. ಅದರಿಂದ ಪಾರಾಗಲು ಹೆಣಗಾಡುತ್ತಿರುವಾಗಲೇ ಕೊಕ್ಕೆ ಕಂದು ಎಂಬ ಇನ್ನೊಂದು ಭೀಕರ ರೋಗ ಅಪ್ಪಳಿಸಿತು. ಬಹುತೇಕ ಯಾಲಕ್ಕಿ ಹನಾಲುಗಳು ಪಾಳು ಬಿದ್ದವು.

ಕೆಲವರು ಅದರಲ್ಲೇ ನೆರಳು ತೆಗೆದು ಕಾಫಿ ಕೂರಿಸಿದರು. ಕೆಲವು ಯುವಕರು ಹೊಟ್ಟೆಪಾಡು ನೋಡಿಕೊಳ್ಳಲು ಮಹಾನಗರದ ಕಡೆ ಹೋಗಿ, ಬೇಕರಿ, ಬಾರು, ಫ್ಯಾಕ್ಟರಿ ಮುಂತಾದ ಕಡೆ ತೂರಿಕೊಂಡರೆ, ಇನ್ನು ಕೆಲವರು ಟೀ ಕ್ಯಾಂಟೀನ್, ಸಣ್ಣಪುಟ್ಟ ಗೂಡಂಗಡಿ ಇಟ್ಟುಕೊಂಡು ದುಡ್ಡು ನೋಡತೊಡಗಿದರು.

ಈ ಮಧ್ಯೆ ಊರ ಕಡೆ ಪ್ರವಾಸೋದ್ಯಮದ ಗಾಳಿ ಬೀಸತೊಡಗಿತು. ಕಾಡಿನ ನಡುವಿನ ಹೊಳೆ,ಜಲಪಾತಗಳನ್ನು ಸಂದರ್ಶಿಸಲು, ಉನ್ನತ ಗುಡ್ಡವೇರಿ ಸೂರ್ಯಾಸ್ತಮಾನ ವೀಕ್ಷಿಸಲು ರಜಾದ